# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.

## ಸಿ.ಸಿ. ಸಂಖ್ಯೆ:264/2020

| | |
|---|---|
| ಫ್ರಾಸಾ | 7 |
| ಚಾಸಾ | 7 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 18.02.2026.**

ಸಾಕ್ಷಿಯ ಹೆಸರು : ಮಹಮದ್ ಶಫಿ
ತಂದೆಯ/ಗಂಡನ ಹೆಸರು : ಅಬ್ದುಲ್ ಸತ್ತಾರ್
ವಯಸ್ಸು : 65 ವರ್ಷ
ಉದ್ಯೋಗ : ನಿವೃತ್ತ ಎ.ಎಸ್. ಐ
ವಾಸಸ್ಥಳ : ಬಾಗೇಪಲ್ಲಿ

**(ಆರೋಪಿಯು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.)**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ**

ದಿಃ 2017 ರಿಂದ 2021 ರವರೆಗೆ ಚೇಳೂರು ಪೊಲೀಸ್ ಠಾಣೆಯಲ್ಲಿ ಎ.ಎಸ್. ಐ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿಃ 20.05.2019 ರಂದು ಬೆಳ್ಳಗ್ಗೆ 11.55 ರಲ್ಲಿ ಚಾಸಾ-1ರವರು ನಿಪಿ-1ರಂತೆ ನೀಡಿದ ಲಿಖಿತ ದೂರನ್ನು ಪಡೆದು ಅಪರಾದ ಸಂಖ್ಯೆ 27/2019, ಭಾರತೀಯ ದಂಡ ಸಂಹಿತೆ 323, 324, 354, 504, 506 ಸಹವಾಚಕ ಕಲಂ 34ರಡಿ ಪ್ರಕರಣ ದಾಖಲಿಸಿಕೊಂಡು ಘನ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು

ನಿವೇದಿಸಿಕೊಂಡಿರುತ್ತೇನೆ. ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದಮ ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು **ನಿಪಿ-5** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-5(ಎ)** ಎಂದು ಗುರುತಿಸಲಾಯಿತು.

ಆದೇ ದಿನ ಸಂಜೆ 5.30 ಕ್ಕೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಫಿರ್ಯಾದುದಾರರು ತೋರಿಸಿದ ಜಾಗದಲ್ಲಿ ಸಾಕ್ಷಿದಾರರಾದ ಚಾಸಾ-3 ರಿಂದ 5 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸ್ಥಳದಿಂದ ಈಗ ತೋರಿಸಿದ ಮಚ್ಚನ್ನು ವಶಪಡಿಸಿಕೊಂಡೆ ಎಂದು ನುಡಿಯುತ್ತಾರೆ. ನಿಪಿ-2 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಾಲಾಯಿತು. ಸದರಿ ಮಚ್ಚನ್ನು ಸ್ವತ್ತಿನ ಪಟ್ಟಿ ಸಂಖ್ಯೆ 24/2019 ರಲ್ಲಿ ನಮೂದಿಸಿಕೊಂಡು, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಈ ಹಂತದಲ್ಲಿ ಸಾಕ್ಷಿಗೆ ಸ್ವತ್ತಿನ ಪಟ್ಟಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಸ್ವತ್ತಿನ ಪಟ್ಟಿಯ ಪ್ರತಿಯನ್ನು **ನಿಪಿ-6** ಎಂದು, ಸಾಕ್ಷಿಯ ಸಹಿಗಳನ್ನು ಕ್ರಮವಾಗಿ **ನಿಪಿ-6(ಎ)** ಮತ್ತು **(ಬಿ)** ಎಂದು ಗುರುತಿಸಲಾಯಿತು. ನಂತರ ಚಾಸಾ-3 ರಿಂದ 5 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಕಡತವನ್ನು ಚಾಸಾ-8 ರವರಿಗೆ ವರ್ಗಾಯಿಸಿರುತ್ತೇನೆ.

**ಪಾಟೀ ಸವಾಲು : ಶ್ರೀ ಆರ್. ಜೆ. ವಕೀಲರಿಂದ, ಆರೋಪಿತರ ಪರವಾಗಿಃ**

ಚಾಸಾ-1 ರವರು ನೀಡಿದ ಸುಳ್ಳು ದೂರಿನ ಮೇರೆಗೆ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯ ವೇಳೆ ಪಂಚರಿಗೆ ನೋಟೀಸು ನೀಡಲು ತೊಂದರೆ ಇರಲಿಲ್ಲ. ನಾನು ಆ ದಿನ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ, ಮಚ್ಚನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು

ಠಾಣೆಯಲ್ಲಿ ಸಿದ್ದಪಡಿಸಿದ್ದೇನೆ ಎಂದರೆ ಸರಿಯಲ್ಲ. ಪಂಚರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ,

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.